# ಕೂಚಿಪೂಡಿ ನೃತ್ಯ ಪಠ್ಯವಸ್ತು



## ಪ್ರಾಥಮಿಕ ಹಂತ (ಜೂನಿಯರ್)

### ಶಾಸ್ತ್ರವಿಭಾಗ: ಪತ್ರಿಕೆ

**ಪಾರಿಭಾಷಿಕ ಶಬ್ದಗಳ ಸಾಮಾನ್ಯ ಜ್ಞಾನ (ಹೆಸರಿಸುವುದು ಮಾತ್ರ).**

1. **ದಶವಿಧ ಅಡವುಗಳು: 1) ಉಸಿ 2) ತಾಂತತ್ತೈ ತೆಹಿತ ತಾತೆಹಿಹಿದಾ ಇತ್ಯಾದಿ**
2. ಚತುರ್ವಿದಾಭಿನಯ: ನವರಸಗಳು, ಸಪ್ತತಾಳಗಳು, ಸಪ್ತಸ್ವರಗಳು, ಸಂಯುತ ಹಸ್ತಗಳು, ಅಸಂಯುತ ಹಸ್ತಗಳು, ಶಿರೋಭೇದ, ನಡೆ ಜಾತಿಗಳು, ಗ್ರೀವ ಭೇದ.
3. ನಾಟ್ಯೋತ್ಪತ್ತಿ–ಭರತ ಮುನಿಗಳ ನಾಟ್ಯ ಶಾಸ್ತ್ರದಂತೆ ನೃತ್ತ, ನೃತ್ಯ ಮತ್ತು ನಾಟ್ಯ ಪದಗಳ ವಿವರಣೆ
4. ಸಭಾ ಲಕ್ಷಣ, ಪಾತ್ರಲಕ್ಷಣ, ಅಪಾತ್ರಲಕ್ಷಣ, ಕಿಂಕಿಣಿ ಲಕ್ಷಣ, ಇವುಗಳ ಬಗ್ಗೆ ತಿಳುವಳಿಕೆ ಮತ್ತು ನಾಟ್ಯ ಕ್ರಮದ ಬಗ್ಗೆ ತಿಳುವಳಿಕೆ,
5. ನಾರಾಯಣ ತೀರ್ಥ, ಸಿದ್ಧೇಂದ್ರ ಯೋಗಿ, ವೇದಾಂತಂ ಲಕ್ಷ್ಮೀನಾರಾಯಣಶಾಸ್ತ್ರಿ ಚಿಂತಾ ವೆಂಕಟರಾಮಯ್ಯ, ಇವರುಗಳ ಜೀವನ ಚರಿತ್ರೆಗಳ ಪರಿಚಯ.
6. ನಾಟ್ಯ ಶಾಸ್ತ್ರದ ಅನುಸಾರವಾಗಿ ಪಾದಕರ್ಮಗಳ ಬಗ್ಗೆ ತಿಳುವಳಿಕೆ: ಉದ್ಘಟಿತ, ಸಮ, ಅಗ್ರತಲ ಸಂಚರ, ಅಂಚಿತ, ಕುಂಚಿತ, ಸೂಚಿ
7. ರಂಗಪೂಜೆ, ಜತಿಸ್ವರ, ಪುಷ್ಪಾಂಜಲಿ, ನೃತ್ಯ ಬಂಧಗಳ ಲಕ್ಷಣಗಳ ಬಗ್ಗೆ ತಿಳುವಳಿಕೆ.

### ದೃಶ್ಯಜ್ಞಾನ–ಪತ್ರಿಕೆ

1. ಕೂಚಿಪೂಡಿ ನೃತ್ಯದ ಸಂಕೇತ ಮತ್ತು ಅದರ ಮಹತ್ವದ ತಿಳುವಳಿಕೆ.
2. ಕೂಚಿಪೂಡಿ ಸಂಪ್ರದಾಯದ ಬಗ್ಗೆ ಅರಿವು.
3. ಕೂಚಿಪೂಡಿ, ಬ್ರುಕುಂಸಕ, ಕುಟಿಲಕ, ಈ ಮೂರು ಪದಗಳ ಅರ್ಥ ವಿವರಣೆ.
4. ಕೂಚಿಪೂಡಿ ಲಕ್ಷಣವನ್ನು ತಿಳಿಸುವ ಶ್ಲೋಕದ ತಿಳುವಳಿಕೆ ಮತ್ತು ಸಾರಾಂಶ.
5. ಕೂಚಿಪೂಡಿ ನೃತ್ಯಕ್ಕೆ ಬಳಸುವ ಸಂಗೀತ ವಾದ್ಯಗಳ ಬಗ್ಗೆ ತಿಳುವಳಿಕೆ.

### ಪ್ರಯೋಗ ವಿಭಾಗ:: ಪತ್ರಿಕೆ–1

1. ವ್ಯಾಯಾಮಗಳ ಪ್ರದರ್ಶನ.
2. ಅಡವುಗಳ ಪ್ರದರ್ಶನ
3. ಯಾವುದಾದರೂ ಐದು ಜತಿಗಳ ಪ್ರದರ್ಶನ.
4. ವಿನಾಯಕ ಕೌತ್ವಂ ಅಥವಾ ನಟೇಶ ಕೌತ್ವಂ (ಚಿದಂಬರ ಕೌತ್ವಂ) ಇದರ ಪ್ರದರ್ಶನ.
5. ರಂಗಪೂಜೆಯ ಪ್ರದರ್ಶನ.
6. ಶಾಸ್ತ್ರೀಯ ಸಂಗೀತದಲ್ಲಿ–ಸರಳೆವರಸೆ–7, ಅಲಂಕಾರಗಳು–7, ಮತ್ತು ಗೀತೆಗಳು–4 ಇವುಗಳನ್ನು ಶ್ರುತಿಯೊಡನೆ ಹಾಡುವುದು.
7. ಪ್ರಾಯೋಗಿಕ ಪರೀಕ್ಷೆಯಲ್ಲಿ ತಿಳಿಸಿರುವ ಎಲ್ಲ ನೃತ್ಯಬಂಧಗಳನ್ನೂ ಶೃತಿ, ತಾಳ

ಸಹಿತ ಹಾಡುವುದನ್ನು ಅಭ್ಯಸಿಸುವುದು,

**ಪತ್ರಿಕೆ–2**

ಮೌಖಿಕ: 1. ಸಂಯುತ ಅಸಂಯುತ ಹಸ್ತಗಳನ್ನು ಗುರುತಿಸುವುದು.

2. ಪುಷ್ಪಾಂಜಲಿ, ಜತಿಸ್ವರ (ಅಠಾಣ ರಾಗ), ರಂಗಪೂಜೆಗಳ ತಿಳುವಳಿಕೆ.

1. ಶಬ್ದಂ– (1) ಮಂಡೂಕಶಬ್ದಂ (ಗಜೇಂದ್ರಮೋಕ), 2) ರಾಮ ಶಬ್ದಂ (ಕ್ಷೀರಾಭಿ ಶಯನುಡೇ...).
2. ಕೀರ್ತನೆಗಳು–ಯಾವುದಾದರೂ ಎರಡು ಅನ್ನಮಾಚಾರ್ಯರ ಕೃತಿಗಳು, ಮೇಲೆ ತಿಳಿಸಿರುವ ನೃತ್ಯ ಬಂಧಗಳ ಪ್ರದರ್ಶನ.

# ಮಾಧ್ಯಮಿಕ ಹಂತ (ಸೀನಿಯರ್)

## ಶಾಸ್ತ್ರವಿಭಾಗ ಪತ್ರಿಕೆ–1

1. **ಹೇಳಿರುವ ಪಾರಿಭಾಷಿಕ ಶಬ್ದಗಳ ವಿವರವಾದ ಜ್ಞಾನ.**
   ನೃತ್ತ, ನೃತ್ಯ, ನಾಟ್ಯ, ತಾಂಡವ, ಲಾಸ್ಯ, ಚಾರಿ, ಪದವಿನ್ಯಾಸ, ಸ್ಥಾನಕ, ರಂಗಪ್ರವೇಶ, ಅಂಗಶುದ್ಧಿ, ಅಡವು ಶುದ್ಧಿ,
2. ಸಂಯುತ ಮತ್ತು ಅಸಂಯುತ ಹಸ್ತಗಳ ವಿನಿಯೋಗ.
3. ನಾಟ್ಯಶಾಸ್ತ್ರದ ಅನುಸಾರವಾಗಿ ಪೂರ್ವರಂಗ ವಿಧಿಯ ಬಗ್ಗೆ ತಿಳುವಳಿಕೆ.
4. ಕೂಚಿಪೂಡಿ ನೃತ್ಯ ಶೈಲಿಯಲ್ಲಿ ಶ್ರೀಕೃಷ್ಣನಿಗೆ ಇರುವ ಪ್ರಾಧಾನ್ಯತೆಯ ವಿವರಣೆ,
5. ಕೂಚಿಪೂಡಿ ನೃತ್ಯ ಶೈಲಿಯ ವೇಷಭೂಷಣಗಳ ವಿವರಣೆ.

**ಪತ್ರಿಕೆ–2**

1. ಕೂಚಿಪೂಡಿ ನೃತ್ಯಶೈಲಿಯ ಇತಿಹಾಸ, ಭಾಗವತ ಮೇಳದಿಂದ ಇಂದಿನವರೆಗೆ ಇದರ ಅಭಿವೃದ್ಧಿ ಬಗ್ಗೆ ತಿಳುವಳಿಕೆ.
2. ಸಪ್ತತಾಳಗಳ ಪರಿಚಯ.
3. ತ್ಯಾಗರಾಜರು, ಕ್ಷೇತ್ರಯ್ಯ, ಜಯದೇವ ಮತ್ತು ಅನ್ನಮಾಚಾರ್ಯ–ಈ ವಾಗ್ಗೇಯಕಾರರ ಕೊಡುಗೆ ಮತ್ತು ಜೀವನ ಚರಿತ್ರೆ,
4. ಕೆಳಗೆ ಕೊಟ್ಟಿರುವ ರಾಗ ಲಕ್ಷಣಗಳ ತಿಳುವಳಿಕೆ:
   ಮೋಹನ, ಶಂಕರಾಭರಣ, ಕಾಂಬೋಧಿ, ಆನಂದಭೈರವಿ, ಬಿಲಹರಿ, ಹಿಂದೋಳ, ಅರಭಿ, ಕೇದಾರಗೌಳ, ಸುರಟಿ ಮತ್ತು ಮಧ್ಯಮಾವತಿ,
5. ಕೌತ್ವಂ, ಜತಿಸ್ವರ, ಶಬ್ದಂ, ತರಂಗ, ದಶಾವತಾರ, ಕೀರ್ತನೆ, ಪದ, ಜಾವಳಿ, ತಿಲ್ಲಾನ ಈ ನೃತ್ಯ ಬಂಧಗಳ ಲಕ್ಷಣಗಳು.



**ಪ್ರಯೋಗ ವಿಭಾಗ:: ಪತ್ರಿಕೆ–1**

**ಮೌಖಿಕ:**

1. ಸಂಯುತ ಮತ್ತು ಅಸಂಯುತ ಹಸ್ತಗಳ ವಿನಿಯೋಗ, ದೇವತಾ ಹಸ್ತಗಳ ಮತ್ತು ಸಪ್ತತಾಳಗಳ ಪರಿಚಯ.
2. ಶಾಸ್ತ್ರೀಯ ಸಂಗೀತ:
   ಅ. ಪ್ರಾಯೋಗಿಕ ಪರೀಕ್ಷೆಗೆ ಕೊಟ್ಟಿರುವ ನೃತ್ಯಬಂಧಗಳನ್ನು ಶೃತಿ ಸಹಿತ ಹಾಡುವುದು.
   ಆ. ಯಾವುದಾದರೂ ಎರಡು ತಾನವರ್ಣಗಳನ್ನು ಶೃತಿಸಹಿತ ಹಾಡುವುದು.

**ಪತ್ರಿಕೆ–2**

1. ಅ. ಯಾವುದಾದರೂ 5ಜತಿಗಳ ಪ್ರದರ್ಶನ.
   ಆ. ಶ್ರೀರಂಗಶಬ್ದಂ ಮತ್ತು ಕೃಷ್ಣಶಬ್ದಂ – ಈ ಎರಡು ಶಬ್ದಗಳ ಅಭಿನಯ.
   ಇ. ತರಂಗ (ಬಾಲಗೋಪಾಲ ಮಾಮುದ್ದರ ಕೃಷ್ಣ)
   ಈ. ಯಾವುದಾದರೂ ಒಂದು ಅಷ್ಟಪದಿಯ ಪ್ರದರ್ಶನ.
   ಉ. ಯಾವುದಾದರೂ ಒಂದು ತಿಲ್ಲಾನದ ಪ್ರದರ್ಶನ

**ಪತ್ರಿಕೆ–3**

**ಕೆಳಗೆ ಹೇಳಿರುವ ನೃತ್ಯಬಂಧಗಳ ಅಭಿನಯ:**

1. ಶ್ರೀ ರಾಮ ಪಟ್ಟಾಭಿಷೇಕಂ
2. ಪ್ರಹ್ಲಾದ ಪಟ್ಟಾಭಿಷೇಕಂ
3. ದಶಾವತಾರಂ
4. ಮಂಡೋದರಿ ಕಲ್ಯಾಣಂ
5. ಯಾವುದಾದರೂ ಎರಡು ಕ್ಷೇತ್ರಯ್ಯನವರ ಪದಗಳು.
6. ದೇವಾಲಯ ನೃತ್ಯ ಪದ್ಧತಿ
7. ಆಂಧ್ರದ ಒಂದು ಜಾನಪದ ನೃತ್ಯ

# ವಿದ್ವತ್ಪೂರ್ವ (ಪ್ರಿ–ಪ್ರೊಫಿಷಿಯನ್ಸಿ)

## ಶಾಸ್ತ್ರವಿಭಾಗ ಪತ್ರಿಕೆ–1

1. ಈ ಕೆಳಗೆ ಹೇಳಿರುವ ಪಾರಿಭಾಷಿಕ ಶಬ್ದಗಳ ವಿವರವಾದ ಪರಿಚಯ.
   1. ಅಂಗ 2, ಪ್ರತ್ಯಂಗ, 3. ಉಪಾಂಗ 4. ಮಂಡಲ, 5. ಭ್ರಮರಿ, 6. ಚಾರಿ 7. ಗತಿ 8. ಕರಣ 9. ಅಂಗಹಾರ, 10. ನಾಟ್ಯಧರ್ಮಿ 11. ಲೋಕಧರ್ಮಿ, 12. ಮುಕ್ತಾಯ.
2. ಚತುರ್ವಿಧ ಅಭಿನಯಗಳ ವಿಶೇಷ ಅಭ್ಯಾಸಗಳು ಮತ್ತು ಅವುಗಳ ವಿವರವಾದ ಅರ್ಥ.
3. ನೃತ್ಯದಲ್ಲಿ ಬಳಸುವ ನವರಸಗಳು ಮತ್ತು 33 ವಿಧ ಭಾವಗಳ ವಿಂಗಡನಾಕ್ರಮ

ಮತ್ತು ಅವುಗಳ ವಿನಿಯೋಗ.

4. ನಾಯಿಕಾ ಮತ್ತು ನಾಯಕಾ ಭಾವ ಮತ್ತು ಅವುಗಳ ವಿವರಣಾತ್ಮಕ ಅಭ್ಯಾಸ.
5. ಮೇಲಿನ ನಾಯಿಕ, ರಸಭಾವಗಳಿಗೆ ಅನುಗುಣವಾದ ಸ್ಥಾಯಿ, ಸಂಚಾರಿ ಭಾವಗಳ ಬಗ್ಗೆ ತಿಳುವಳಿಕೆ.
6. ಶಿವನ ಸಪ್ತ ತಾಂಡವಗಳ ವಿಶೇಷ ತಿಳುವಳಿಕೆ.
7. ಅಷ್ಟವಿಧ ನಾಯಿಕ ಅಭಿನಯ, ಲಕ್ಷಣಗಳ ಅಭ್ಯಾಸ

**ಪತ್ರಿಕೆ–2**

1. ಕೂಚೀಪೂಡಿಯಲ್ಲಿ ಸತ್ಯಭಾಮೆಯ ಜಡೆಯ ಶೃಂಗಾರದ ಸಂಪೂರ್ಣ ವಿವರಣೆ.
2. ಈ ಕೆಳಗೆ ಕೊಟ್ಟಿರುವ ನೃತ್ಯನಾಟಕಗಳ ಕಥಾವಸ್ತುವಿನ ವಿವರಣೆ.

(1) ಪಾರಿಜಾತ ಅಪಹರಣ (2) ಉಷಾ ಪರಿಣಯಂ (3) ಶ್ರೀನಿವಾಸ ಕಲ್ಯಾಣಂ
(4) ಗೊಲ್ಲಕಲಾಪಂ (5) ಶಿವ ಮೋಹಿನಿ (6) ವಿಪ್ರನಾರಾಯಣ

3. ಕೂಚಿಪೂಡಿ ನೃತ್ಯದಲ್ಲಿ ವಾಚಿಕಾಭಿನಯದ ಪ್ರಾಮುಖ್ಯತೆಯ ಸಂಪೂರ್ಣ ತಿಳುವಳಿಕೆ.
4. ಭಾರತದ ವಿವಿಧ ಶಾಸ್ತ್ರೀಯ ನೃತ್ಯಗಳ ಬಗ್ಗೆ ವಿವರಣೆ ಮತ್ತು ಅವುಗಳ ವೇಷ ಭೂಷಣಗಳನ್ನು ಕುರಿತು ವಿಶೇಷ ತಿಳುವಳಿಕೆ.
5. ಈ ಕೆಳಗೆ ತಿಳಿಸಿರುವ ವಿಶೇಷ ನೃತ್ಯನಾಟಕಗಳ ಕಥಾವಸ್ತುವಿನ ವಿವರಣೆ:
   1. ದಕ್ಷಯಜ್ಞ, 2. ಭಕ್ತ ಪ್ರಹ್ಲಾದ, 3.ನೌಕಾಚರಿತ್ರಂ, 4, ಸುಭದ್ರಾಕಲ್ಯಾಣಂ,
6. ರಂಗಭೂಮಿ, ಅದರ ಸಿದ್ಧತೆ, ಅವಶ್ಯಕತೆ ಮತ್ತು ಪ್ರದರ್ಶನಾ ವ್ಯವಸ್ಥೆಗಳು, ದೀಪ ಮತ್ತು ಧ್ವನಿವರ್ಧಕಗಳ ಉಪಯೋಗದ ಬಗ್ಗೆ ತಿಳುವಳಿಕೆ.

**ಪ್ರಯೋಗ ವಿಭಾಗ:ಪತ್ರಿಕೆ–1**

1. **ಈ ಕೆಳಗಿನ ಪಾರಿಭಾಷಿಕ ಶಬ್ದಗಳ ವಿವರವಾದ ಅರ್ಥ**
   1. ಲಘು, 2. ಧ್ರುತ, 3. ಜತಿ, 4, ನಡೆ, 5, ಜನ್ಯರಾಗ, 6. ಜನಕರಾಗ,
2. ಪ್ರಯೋಗ ಪತ್ರಿಕೆ– 2 (ವಿದ್ವತ್ ಪೂರ್ವ ಪ್ರಯೋಗಪತ್ರಿಕೆ –2)ರಲ್ಲಿ ಪಟ್ಟಿ ಮಾಡಿರುವ ನೃತ್ಯ ಬಂಧಗಳನ್ನು ಸರಿಯಾದ ತಾಳ ಹಾಗೂ ಶ್ರುತಿ ಸಹಿತ ಹಾಡುವುದು.
3. ಪತ್ರಿಕೆ–2ರಲ್ಲಿ ತಿಳಿಸಿರುವ ನೃತ್ಯಗಳಲ್ಲಿ ಬರುವ ಜತಿಗಳನ್ನು ತಾಳಸಹಿತ ನಟ್ಟುವಾಂಗ ಮಾಡುವುದು.
4. ಶಾಸ್ತ್ರೀಯ ಸಂಗೀತದಲ್ಲಿ ಒಂದು ಅಟತಾಳ ವರ್ಣ, ಎರಡು ತಾನ ವರ್ಣಗಳನ್ನು ಹಾಡುವುದು.
5. ಸತ್ಯಭಾಮೆಯ ಜಡೆ ಶೃಂಗಾರ ಮತ್ತು ಇತರ ವೇಷಭೂಷಣಗಳ ಸಂಪೂರ್ಣ ವಿವರಣೆ.



**ಪತ್ರಿಕೆ–2**

1. ಯಾವುದಾದರೂ ಐದು ತಾಳಗಳಲ್ಲಿ ಜತಿಗಳ ಪ್ರದರ್ಶನ.
2. ತರಂಗ: 'ನೀಲ ಮೇಘ ಶರೀರದ ಪ್ರದರ್ಶನ.
3. 1. ಅನ್ನಮಯ್ಯ 2. ಕ್ಷೇತ್ರಯ್ಯ
   3. ವಾಸುದೇವಾಚಾರ್ 4. ಮುತ್ತುಸ್ವಾಮಿ ದೀಕ್ಷಿತರು
   5. ರಾಮದಾಸರು–ಈ ವಾಗ್ಗೇಯಕಾರರ ಒಂದೊಂದು ಕೀರ್ತನೆಯ ಅಭಿನಯ.
4. 1. ಲಿಂಗಾಷ್ಟಕ, 2.ಶಿವಾಷ್ಟಕ, 3. ಕಾಲಭೈರವಾಷ್ಟಕ–ಇವುಗಳ ಅಭಿನಯ.
5. ಎರಡು ತಿಲ್ಲಾನಗಳ ಪ್ರದರ್ಶನ

## ವಿದ್ವತ್ ಅಂತಿಮ (ಪ್ರೊಫಿಷಿಯನ್ಸಿ ಫೈನಲ್)

**ಶಾಸ್ತ್ರ ವಿಭಾಗ ಪತ್ರಿಕೆ–1**

1. ಕೂಚೀಪೂಡಿಯ 'ಭಾಮಾ ಕಲಾಪಂ' ನೃತ್ಯದಲ್ಲಿ ಅಷ್ಟವಿಧ ನಾಯಕಿಯರನ್ನು ವಿವರಿಸುವುದು.
2. ಮಹಾಕವಿ ಕಾಳಿದಾಸರ ಕೆಳಗಿನ ನಾಟಕಗಳ ಕಥಾವಸ್ತುವಿನ ತಿಳುವಳಿಕೆ:
   1. ಅಭಿಜ್ಞಾನ ಶಾಕುಂತಲಾ, 2. ಮಾಲವಿಕಾಜ್ಞ ಮಿತ್ರಂ, 3. ಕುಮಾರ ಸಂಭವ.
3. 19ನೆಯ ಹಾಗೂ 20ನೆಯ ಶತಮಾನಗಳಲ್ಲಿ ಕೂಚಿಪೂಡಿ ಗುರುಗಳ ಹಾಗೂ ಆ ನೃತ್ಯಶೈಲಿಗೆ ಅವರುಗಳ ಕೊಡುಗೆಯ ಬಗ್ಗೆ ವಿವರ.
4. ಕೆಳಗಿನ ಪಾರಿಭಾಷಿಕ ಶಬ್ದಗಳ ವಿವರವಾದ ಅರ್ಥ: ಮಾರ್ಗ, ದೇಶಿ, ವೃತ್ತಿ ಮತ್ತು ಪ್ರವೃತ್ತಿ.
5. **ಕೆಳಗಿನ ಕುಟುಂಬಗಳ ಪರಂಪರೆಯ ವಿವರ:**
   ಭಾಗವತುಲ, ವೇದಾಂತಂ, ವೆಂಪಟಿ, ಮಹಂಕಾಳಿ, ಪಸುಮರ್ತಿ.

**ಪತ್ರಿಕೆ–2 (ಅ)**

1. ಈ ಮೂರು ಕೃತಿಗಳ ಇತಿಹಾಸಗಳ ವಿವರವಾದ ಜ್ಞಾನ
   ಮಹಾಭಾರತ, ರಾಮಾಯಣ, ಭಗವದ್ಗೀತೆ.
2. ಈ ಕೆಳಗಿನ ಶ್ಲೋಕಗಳ ಅರ್ಥಪೂರ್ಣ ಪರಿಚಯ:
   1. ಅಂಗಿಕಂ ಭುವನಂ.... 2. ಗುರುಬ್ರಹ್ಮ..
   3. ಸಭಾಕಲ್ಪ.... 4. ನವರಸಶ್ಲೋಕ(ಶೃಂಗಾರೇ ಕ್ಷಿತಿನಂದಿನಿ)
3. ದೇವತಾ ಹಸ್ತಗಳ ಮತ್ತು ದಶಾವತಾರ ಹಸ್ತಗಳ ವಿವರವಾದ ತಿಳುವಳಿಕೆ, ಅವುಗಳ ವಿನಿಯೋಗ ಮತ್ತು ವಿಶೇಷ ಲಕ್ಷಣಗಳ ಪರಿಚಯ.
4. ಕೂಚಿಪೂಡಿ ನೃತ್ಯಶೈಲಿಯಲ್ಲಿ ವಿವರವಾದ ಅರ್ಥ (ಸಾರಾಂಶ):

(1) ಒಂದು ಕೀರ್ತನೆ, (2) ತರಂಗಂ–1, (3) ಅಷ್ಟಪದಿ, (4) ಯಾವುದಾದರೂ 2 ಶ್ಲೋಕಗಳು.

**ಪತ್ರಿಕೆ–2 (ಆ)**

**1. ಕೆಳಗೆ ತಿಳಿಸಿರುವ ರಾಗ ಲಕ್ಷಣಗಳ ಪರಿಚಯ:**

1. ಖರಹರಪ್ರಿಯ, 2. ಕಲ್ಯಾಣಿ, 3. ಭೈರವಿ, 4, ಪೂರ್ವಿಕಲ್ಯಾಣಿ, 5. ಅಠಾಣ, 6. ಕಾಪಿ, 7.ಹುಸೇನಿ, 8. ವಸಂತ, 9.ಬಾಗೇಶ್ರೀ, 10. ಶ್ರೀ ರಾಗ, 11. ದೇಶ್ 12. ಆನಂದ ಭೈರವಿ.

2. ನರ್ತಕಿ, ಭಾಗವತುಲು, ಗಾಯಕ ಮತ್ತು ಸಭೆ–ಇವುಗಳ ಲಕ್ಷಣಗಳ ಪರಿಚಯ.
3. ಅ. ನಾಟ್ಯಶಾಸ್ತ್ರ ನೃತ್ಯಕ್ಕೆ ಸಂಬಂಧಪಟ್ಟ ಅಧ್ಯಾಯಗಳು
   ಆ. ನಾಟ್ಯಶಾಸ್ತ್ರದ ಬಗ್ಗೆ ಇರುವ ಇತರ ಪುರಾತನ ಕೃತಿಗಳ ಪರಿಚಯ.
4. ಕೂಚಿಪೂಡಿ ನೃತ್ಯಕ್ಕೆ ಸಂಬಂಧಿಸಿದಂತೆ ಪರೀಕ್ಷಾಪತ್ರಿಕೆಯಲ್ಲಿ ಸೂಚಿಸುವ ಪದ್ಯದ ಅರ್ಥಸಹಿತ ವಿವರಣೆ.
5. ಕೂಚಿಪೂಡಿಯ 'ಗೊಲ್ಲಕಲಾಪಂ' ನೃತ್ಯಬಂಧದಲ್ಲಿ 'ಗೊಲ್ಲ' ಪಾತ್ರದ ಸಂಪೂರ್ಣ ವಿವರಣಾತ್ಮಕ ತಿಳುವಳಿಕೆ.
6. ಕೂಚಿಪೂಡಿ ನೃತ್ಯಶೈಲಿ ಹಾಗೂ 'ಯಕ್ಷಗಾನ' ಇವುಗಳ ನಡುವಿನ ಸಂಬಂಧದ ತಿಳುವಳಿಕೆ.

**ಪ್ರಯೋಗ ವಿಭಾಗ:ಪತ್ರಿಕೆ–1**

**ಕೆಳಗೆ ಸೂಚಿಸಿರುವ ನೃತ್ಯ ಬಂಧಗಳ ಪ್ರದರ್ಶನ.**

1. ಪದ–ಯಾವುದಾದರೂ ನಾಲ್ಕು
2. ಯಾವುದಾದರೂ ಒಂದು ದೇವಿಸ್ತುತಿ.
3. ನಟರಾಜ ಸ್ತುತಿ – ಯಾವುದಾದರೂ ಒಂದು.
4. ಜಾವಳಿ – ಯಾವುದಾದರೂ ಎರಡು.
5. 'ಶ್ರೀ ಕೃಷ್ಣಾ ಕರ್ಣಾಮೃತ' ದಿಂದ ಆರಿಸಿದ ಯಾವುದಾದರೂ ಎರಡು ಶ್ಲೋಕಗಳಿಗೆ ಅಭಿನಯ.
6. ತರಂಗ–ನಂದನಂದನಾ' ಅಥವಾ 'ಗೋವರ್ಧನ ಗಿರಿಧಾರ'

**ಪತ್ರಿಕೆ–2 (ಭಾಗ–1)**

**ಕೆಳಗೆ ತಿಳಿಸಿರುವ ನೃತ್ಯಬಂಧಗಳನ್ನು ಪ್ರದರ್ಶಿಸುವುದು:**

1. ಭಾಮಾಕಲಾಪಂ, 2. ದರುವು, 3, ಚೂರ್ಣಿಕಾ, 4, ಎರಡು ಪದ್ಯಗಳಿಗೆ ಅಭಿನಯ (ತೆಲುಗು ಕಾವ್ಯಗಳಿಂದ) 5. ವಿದ್ಯಾರ್ಥಿಗೆ ಇಷ್ಟವಾದ ಯಾವುದಾದರೂ ಒಂದು ಶಾಸ್ತ್ರೀಯ ನೃತ್ಯ (ಕೂಚಿಪೂಡಿ ಶೈಲಿಯಲ್ಲಿ),



**ಪತ್ರಿಕೆ – 2 (ಭಾಗ–II)**

**ಮೌಖಿಕ:**

1. ಚೂರ್ಣಿಕಾ–ಇದನ್ನು ಶ್ರುತಿ ಸಹಿತ ಹಾಡುವುದು.
2. 'ಭಾಮಾ ಕಲಾಪಂ'ಗೆ ನಟ್ಟುವಾಂಗ ಮಾಡುವ ಸಾಮರ್ಥ್ಯ.
3. 'ಭಾಮಾ ಕಲಾಪಂ'ನಲ್ಲಿ ಬರುವ ಭಾಮೆಯ ವಾಚಿಕಾಭಿನಯದ ಭಾಗಗಳ ಪ್ರದರ್ಶನ, ಜೊತೆಗೆ ಗೊಲ್ಲ ಕಲಾಪಂ, ಹಾಗೂ ಮಂಡೋದರಿ ಕಲ್ಯಾಣಂ ಇವುಗಳಲ್ಲಿ ಇರುವ ವಾಚಿಕಾಭಿನಯದ ಪ್ರದರ್ಶನ.
4. ಪರೀಕ್ಷಕರು ಸೂಚಿಸಿದ ಯಾವುದಾದರೂ ಒಂದು ಕೃತಿಗೆ ನೃತ್ಯ ಸಂಯೋಜನೆ ಮಾಡುವುದು.

   **(19 ನೇ ಪುಟದಲ್ಲಿ ಹೇಳಿರುವಂತೆ)**

# ಕಥಕ್ ನೃತ್ಯ ಪಠ್ಯವಸ್ತು



# ಪ್ರಾಥಮಿಕ ಹಂತ (ಜೂನಿಯರ್)

## ಶಾಸ್ತ್ರವಿಭಾಗ : ಪತ್ರಿಕೆ–1

1. ಶಾಸ್ತ್ರೀಯ ನೃತ್ಯ ಪದ್ಧತಿಗಳ ತಿಳುವಳಿಕೆ.
2. ಸಭಾ ಲಕ್ಷಣ, ಪಾತ್ರ ಲಕ್ಷಣ, ಕಿಂಕಿಣಿ (ಗೆಜ್ಜೆ) ಲಕ್ಷಣ, ಮತ್ತು ನಾಟ್ಯ ಕ್ರಮದ ಬಗ್ಗೆ ತಿಳುವಳಿಕೆ (ಅಭಿನಯ ದರ್ಪಣದಂತೆ).
3. ಪ್ರಖ್ಯಾತ ನೃತ್ಯ ಗುರುಗಳ ಮತ್ತು ನರ್ತಕರ ಹೆಸರುಗಳನ್ನು ತಿಳಿದಿರತಕ್ಕದ್ದು, (ಶಂಭು ಮಹಾರಾಜ್, ಅಚ್ಚನ್ ಮಹಾರಾಜ್, ಸುಂದರ್ ಪ್ರಸಾದ್‌ಜೀ, ಜೈಲಾಲ್ ಜೀ, ಮೇಡಂ ಮೇನಕಾ)
4. ಕಥಕ್ ನೃತ್ಯದಲ್ಲಿ ಉಪಯೋಗಿಸಲ್ಪಡುವ ತಾಳ ಮತ್ತು ಸಂಗೀತ ವಾದ್ಯಗಳ ಹೆಸರುಗಳನ್ನು ತಿಳಿದಿರಬೇಕು: ಪಖವಾಜ್, ತಬಲಾ, ಸಾರಂಗಿ, ಹಾರ್ಮೋನಿಯಂ, ಕೊಳಲು.
5. ಕರ್ನಾಟಕದಲ್ಲಿನ ನೃತ್ಯ ಶಿಲ್ಪಗಳಿರುವ ದೇವಾಲಯಗಳ ಬಗ್ಗೆ ತಿಳುವಳಿಕೆ.
6. ನಾಟ್ಯ ಉತ್ಪತ್ತಿ (ನಾಟ್ಯ ಶಾಸ್ತ್ರದ ಪ್ರಕಾರ).

## ದೃಶ್ಯಜ್ಞಾನ–ಪತ್ರಿಕೆ

1. ಪಾರಿಭಾಷಿಕ ಶಬ್ದಗಳ ಸಾಮಾನ್ಯ ಜ್ಞಾನ:
   1. ಕಥಕ್ ನೃತ್ಯದಲ್ಲಿ ಬರುವ ವಿಭಿನ್ನ ಲಯ ವಿನ್ಯಾಸಗಳು,
   2. ಚತುರ್ವಿಧ ಅಭಿನಯ.
   3. ನವರಸ.
   4. ಸಪ್ತಸ್ವರ
   5. ಅಸಂಯುತ ಹಸ್ತ
   6. ಸಂಯುತ ಹಸ್ತ.
   7. ಶಿರೋಭೇದ.
   8. ದೃಷ್ಟಿ ಭೇದ.
   9. ಗ್ರೀವಾ ಭೇದ.
   10. ಭ್ರೂ ಭೇದ.
   11. ತಾಳದ ಐದು ಜಾತಿಗಳು.

# ಪ್ರಯೋಗ ವಿಭಾಗ

## ಪತ್ರಿಕೆ–1

**1. ಮೌಖಿಕ:**

1. ಪರೀಕ್ಷಕರು ತೋರಿಸಿದ ಸಂಯುತ, ಅಸಂಯುತ ಹಸ್ತಗಳನ್ನು ಹೆಸರಿಸುವುದು.

2. ಆಮದ್, ಗತ್‌ನಿಕಾಸ್, ಟುಕ್ಡಾಗಳ ಲಕ್ಷಣಗಳನ್ನು ತಿಳಿದಿರತಕ್ಕದ್ದು.

**ಹಾಡುಗಾರಿಕೆ:**

ಅಭ್ಯರ್ಥಿಯು ಸಾಮಾನ್ಯವಾಗಿ ಕಥಕ್ ನೃತ್ಯದಲ್ಲಿ ಉಪಯೋಗಿಸುವ ಶ್ಲೋಕ ಅಥವಾ ಪದವನ್ನು ಅದರ ರಾಗದ ಸ್ವರೂಪವನ್ನು ಲಕ್ಷದಲ್ಲಿಟ್ಟು ಹಾಡತಕ್ಕದ್ದು. ಅಭ್ಯರ್ಥಿಯು ಎರಡು ಬೇರೆ ಬೇರೆ ರಾಗದಲ್ಲಿ ಲೆಹರಾ ಅಥವಾ ನಗಮಾವನ್ನು ಮೂರು ಕಾಲಗಳಲ್ಲಿ ಹಾಡತಕ್ಕದ್ದು.

**ಪತ್ರಿಕೆ–2**

**ನೃತ್ಯ:**

1. ನೃತ್ಯದ ಮೂಲಭೂತ ಚಲನೆಗಳನ್ನು ರೂಪಿಸುವಂತಹ ಶಾರೀರಿಕ ಅಭ್ಯಾಸಗಳು: ಭಾವಭಂಗಿಯನ್ನು ಪಡೆಯಲು ಹಾಗೂ ಚಕ್ಕರದಲ್ಲಿ (ತಿರುಗುವಿಕೆ) ವೇಗವನ್ನು ಹೆಚ್ಚಿಸಲು ಬೇಕಾಗುವ ಶಾರೀರಿಕ ಅಭ್ಯಾಸಗಳು.
2. ತತ್ಕಾರದಲ್ಲಿ ನಾಲ್ಕು ಲಯಗಳು, ಬೋಲ್–ಬಾಂಟ್, ಟುಕ್ಡಾಗಳಲ್ಲಿ ಪ್ರಭೇದಗಳು.
3. ಥಾಟ್, ಆಮದ್, ಗತ್ ಇವುಗಳನ್ನು ನರ್ತಿಸುವಾಗ ಬಳಸುವ ಕಣ್ಣು, ಕುತ್ತಿಗೆ ಹಾಗೂ ಕೈಗಳ ಚಲನೆ.
4. ವಂದನ ಮತ್ತು ರಂಗಮಂಚದ ನಮಸ್ಕಾರ, ಎರಡು ಆಮದ್‌ಳು, ನಾಲ್ಕು ತೋಡಾಗಳು, ಎರಡು ಪರನ್‌ಗಳು, ನಾಲ್ಕು ಚಕ್ರಧಾರಿ ತೋಡಗಳು, 1ನಟುವರಿ ಟುಕ್ಕಾ, ಎರಡು ಕವಿತ (ಈ ಎಲ್ಲವನ್ನೂ ತೀನ್ ತಾಳದಲ್ಲಿಯೇ ನಿರ್ವಹಿಸಬೇಕು.).
5. ಝುಂಪ ತಾಳದ ಜ್ಞಾನ, ಸಮ, ಖಾಲಿ, ಮಾತ್ರೆಗಳ ತಿಳುವಳಿಕೆಯಲ್ಲದೆ ಅದರ ಮೂಲಭೂತ ವಿಭಾಗಗಳನ್ನು ತಿಳಿದಿರಬೇಕು.
   ಒಂದು ಸರಳ ತತ್ ಕಾರ್,
   ಒಂದು ಸಲಾಮಿ ಅಥವ ರಂಗ್‌ಮಂಚ್ ನಮಸ್ಕಾರ.
   ನಾಲ್ಕು ಸರಳ ತೋಡಗಳು,
   ಎರಡು ಸರಳ ಪರನ್‌ಗಳು.
6. **ಗತ್‌ನಿಕಾಸ್:** ಸರಳಗತ್, ಮಟಕಿ,ಮುಕುಟ, ಬಾಂಸುರಿ, ಘುಂಗಟ್, ತೀನ್ ತಾಳದಲ್ಲಿ
   **ಗತ್‌ಭಾವ್**; ಪನಿಹಾರಿ ಅಥವ ಪನ್‌ಘಟ್ (ಬಾಲಿಕೆಯರಿಗೆ), ಮಾಖನ್ ಚೋರಿ (ಬಾಲಕರಿಗೆ) ತೀನ್‌ತಾಳದಲ್ಲಿ
   **ಭಾವನೃತ್ಯ:** ಒಂದು ಭಜನ–ಕೆಹೆರ್ವಾ ಅಥವಾ ದಾದ್ರದಲ್ಲಿ, ಒಂದು ಸರಳ ಠುಮ್ರಿ ತೀನ್ ತಾಳದಲ್ಲಿ.



# ಮಾಧ್ಯಮಿಕ ಹಂತ (ಸೀನಿಯರ್)

**ಶಾಸ್ತ್ರವಿಭಾಗ ಪತ್ರಿಕೆ–1**

1. ಈ ಕೆಳಗಿನ ಪಾರಿಭಾಷಿಕ ಶಬ್ದಗಳ ಜ್ಞಾನ.
   ಭರತ (ಭಾವ, ರಾಗ,ತಾಳ), ತಾಂಡವ ಮತ್ತು ಲಾಸ್ಯ, ತೋಡ ಮತ್ತು ಟುಕ್ಡಾ, ತಿಹಯಿ, ಪರನ್, ನೃತ್ತ, ನೃತ್ಯ, ನಾಟ್ಯ, ರೇಚಕ, ದೇಶಿ ಮತ್ತು ಮಾರ್ಗಿಪದ್ಧತಿ, ಅಂಗ, ರಂಗಪ್ರವೇಶ.
2. ಚತುರ್ವಿಧ ಅಭಿನಯ (ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ವಿಕ) ವಿವರವಾಗಿ ತಿಳಿಯತಕ್ಕದ್ದು.
3. ಅಸಂಯುತ ಹಸ್ತಗಳು, ಸಂಯುತ ಹಸ್ತಗಳು, ನೃತ್ಯ ಹಸ್ತಗಳು ಮತ್ತು ಅವುಗಳ ವಿನಿಯೋಗಗಳು.
4. ಕಥಕ್ ಪ್ರದರ್ಶನದಲ್ಲಿ ಹಿಂದೆ ಮತ್ತು ಇಂದು ಉಪಯೋಗಿಸುತ್ತಿರುವ ಸಂಗೀತ.
5. ಕೆಳಗಿನ ನೃತ್ಯ ಬಂಧಗಳ ಲಕ್ಷಣಗಳು:
   ಆಮದ್, ಟುಕ್ಡಾ ಧ್ರುಪದ್, ಠುಮರಿ ಮತ್ತು ತರಾನಾ
6. ಕಥಕ್ ನೃತ್ಯಕ್ಕೆ ಸಂಬಂಧಪಟ್ಟ ಕೆಳಗಿನ ಶಬ್ದಗಳ ಜ್ಞಾನ:
   1. ಸ್ಥಾನಕ (ನಿಂತುಕೊಳ್ಳುವ ಭಂಗಿ)
   2. ಉತ್‌ಪ್ಲವನ.
   3. ಭ್ರಮರಿ (ಚಕ್ಕರ್)
   4 ಪಾದಚಾರಿ (ಕಾಲಿನ ಚಲನೆ).
7. ನಟರಾಜಮೂರ್ತಿಯ ಶಾಸ್ತ್ರೀಯ ಮತ್ತು ಆಧ್ಯಾತ್ಮಿಕ ವಿವರಗಳು ಅಥವಾ ರಾಸಲೀಲೆಯ ಹಿಂದೆ ಅಡಗಿರುವ ತತ್ವ

**ಪತ್ರಿಕೆ–2**

1. ಕಥಕ್ ಪ್ರದರ್ಶನಕ್ಕೆ ಅವಶ್ಯವಿರುವ ವೇಶಭೂಷಣಗಳನ್ನು ಕುರಿತು ಸಾಮಾನ್ಯ ಜ್ಞಾನ.
2. ಕಥಕ್ ನೃತ್ಯದ ಆರಂಭ, ಇತಿಹಾಸ ಮತ್ತು ಬೆಳವಣಿಗೆ ಇಂದಿನವರೆಗೆ.
3. ಭಾರತದ ನೃತ್ಯ ಪದ್ಧತಿಗಳ ತಿಳುವಳಿಕೆ (ಭರತನಾಟ್ಯ, ಕಥಕ್, ಕಥಕಳಿ, ಮಣಿಪುರಿ, ಒಡಿಸಿ ಮತ್ತು ಕೂಚಿಪೂಡಿ).
4. ಕರ್ನಾಟಕದ ಜಾನಪದ ನೃತ್ಯಗಳು ಮತ್ತು ರಾಜಸ್ಥಾನ, ಉತ್ತರಪ್ರದೇಶ ಮತ್ತು ಗುಜರಾತಿನ ಜಾನಪದ ನೃತ್ಯ.
5. ತಾಳಗಳ ಜ್ಞಾನ: ತೀನ್ ತಾಳ್,
   ಝಪ್ ತಾಳ್,
   ಏಕತಾಳ್,

ಧಮಾರ್ ಇವುಗಳ ಸರಳ ಹಾಗೂ ಕ್ಲಿಷ್ಟ ಪ್ರಯೋಗ
(ತತ್ ಕಾರ್ ಮತ್ತು ಟುಕ್ಡಾಗಳಲ್ಲಿ ಇವುಗಳ ಪ್ರಭೇದ)

6. ಸಾಮಾನ್ಯವಾಗಿ ಕಥಕ್ ನೃತ್ಯದಲ್ಲಿ ಬರುವ ಲೆಹೆರಾ ಅಥವಾ ನಗ್ಮಾ ಮತ್ತು ಕಥಕ್ ಸಂಯೋಜನೆಯಲ್ಲಿ ಬರುವ ಹತ್ತು ರಾಗಗಳು (ಯಮನ್, ಗಾರಾ, ಭೈರವಿ, ಸಾರಂಗ, ಚಂದ್ರಕೌಂಸ್, ದೇಸ್, ಪೀಲು, ಖಮಾಜ್, ಕಾಫಿ, ದರ್ಬಾರಿ ಅಥವಾ ವಸಂತ),
7. ವಾಜೀದ್ ಆಲಿಶಾ, ಕಾಲ್ಕಾ ಮಹರಾಜ್, ' ಬಿಂದಾದಿನ್ ಮಹಾರಾಜ್, ಮಹಾರಾಜ್ ಚಕ್ರಧಾರಿಸಿಂಗ್ ಇವರ ಕೊಡುಗೆ ಮತ್ತು ಜೀವನ ಚರಿತ್ರೆ,

**ಪ್ರಯೋಗ ವಿಭಾಗ**

**ಪತ್ರಿಕೆ – 1**

**ಮೌಖಿಕ:**

1. ಅಸಂಯುತ, ಸಂಯುತ ಮತ್ತು ದೇವತಾ ಹಸ್ತಗಳು ಮತ್ತು ಅವುಗಳ ವಿನಿಯೋಗ.
2. ತಾಳಗಳು ಮತ್ತು ಅವುಗಳ ಅಂಗ.

**ಹಾಡುಗಾರಿಕೆ:**

ಅಭ್ಯರ್ಥಿಯು ಟುಕ್ಕಾ ಪರನ್ ಇತ್ಯಾದಿಗಳನ್ನು ಸಮ್, ಖಾಲಿ, ತಾಲಿ ಇವುಗಳನ್ನು ತಾಳ ಹಾಕಿಕೊಂಡು ಹೇಳಬೇಕು. ಅಭ್ಯರ್ಥಿಯು ಒಂದು ಠುಮ್ರಿ ಹಾಗೂ ಒಂದು ಧ್ರುಪದನ್ನು ಶ್ರುತಿ ಸಹಿತ ತಾಳ ಹಾಕಿಕೊಂಡು ಹಾಡಬೇಕು.

**ಪತ್ರಿಕೆ – 2**

**ನೃತ್ಯ:**

1. ನೃತ್ಯಕ್ಕೆ ಉಪಯೋಗವಾಗುವ ಆಸನಗಳು, ಮೂಲಭೂತ ಚಲನೆಗಳನ್ನು ರೂಪಿಸುವಂತಹ ಶಾರೀರಿಕ ಅಭ್ಯಾಸಗಳು: ಪದ್ಮಾಸನ, ಆಬದ್ಧ ಪದ್ಮಾಸನ, ತ್ರಿಕೋಣಾಸನ, ವೃಕ್ಷಾಸನ, ಮಂಡುಕಾಸನ, ಭುಜಂಗಾಸನ.
2. ಎಲ್ಲಾ ಟುಕ್ಡಾ ಮತ್ತು ಪರನ್‌ಗಳನ್ನು ಮೂರು ಕಾಲದಲ್ಲಿ ತೋರಿಸತಕ್ಕದ್ದು: 10 ಟುಕ್ಡಾ, 10 ಪರನ್‌ಗಳು,
3. ಎರಡು ಹೆಚ್ಚಿಗೆ ತಾಳಗಳನ್ನು ಕಲಿಯತಕ್ಕದ್ದು–ಏಕತಾಳ (ತ್ರಿಶ್ರಜಾತಿ) ಝುಪ್‌ತಾಳ್ (ಖಂಡಜಾತಿ) ಈ ತಾಳಗಳ ಮೂರು ಕಾಲಗಳಲ್ಲಿ ತತ್‌ಕಾರಗಳನ್ನು, ಒಂದು ಆಮದ, ನಾಲ್ಕು ತೋಡಾಗಳು, ಒಂದು ಥಾಟ್, ಎರಡು ಪರನ್, ಎರಡು ತಿಹಾಯ್ ಇವುಗಳನ್ನು ನೃತ್ಯ ಮಾಡಿ ತೋರಿಸತಕ್ಕದ್ದು.
4. ಧಮಾರ್ ತಾಳದಲ್ಲಿ ಥಾಟ್, ಆಮದ್, ಪರನ್ ತೋರಿಸತಕ್ಕದ್ದು.
5. ಒಂದು ತರಾನಾ– ಏಕತಾಳದಲ್ಲಿ ಪ್ರದರ್ಶಿಸುವುದು.
6. **ಗತ್‌ಭಾವ:** ಮಹಾಭಾರತದ ಸನ್ನಿವೇಶವನ್ನು ಬಳಸಿಕೊಂಡು ದೌಪದೀ ವಸ್ತ್ರಾಪಹರಣ, ಗೀತೋಪದೇಶ ಇತ್ಯಾದಿಗಳನ್ನೂ, ಭಾಗವತದ ಸನ್ನಿವೇಶದಿಂದ ಕಂಸವಧಾ ಮತ್ತು ಕಾಳೀಯ ದಮನ ಇತ್ಯಾದಿಗಳನ್ನೂ ತೋರಿಸುವುದು,



**ಪತ್ರಿಕೆ – 3**

1. ಒಂದು ಚತುರಂಗ (ತೀನ್ ತಾಳದಲ್ಲಿ) ಅಥವಾ ತಾಲ್ ಮಾಲಾ.
2. ಇಬ್ಬರು ಬೇರೆ ಬೇರೆ ನಾಯಿಕೆಯರನ್ನು ವರ್ಣಿಸುವ ಎರಡು ಠುಮರಿ.
3. ಒಂದು ದಾದ್ರಾ.
4. ಒಂದು ಕವಿತಾ–ರಾಸಲೀಲೆ ಅಥವಾ ಕಾಲಿಯಾ ದಮನ್.
5. ಅಭ್ಯರ್ಥಿಯು ಇಚ್ಛಿಸುವ ಒಂದು ಶಾಸ್ತ್ರೀಯ ನೃತ್ಯ ರಚನೆ.
6. ಎರಡು ಬೇರೆ ಬೇರೆ ರಾಗ ಹಾಗೂ ತಾಳಗಳಲ್ಲಿ ಎರಡು ತಾರಾನಾಗಳು (ಇದನ್ನು ಪ್ರಾಥಮಿಕ ತರಗತಿಯಲ್ಲಿ ಅಭ್ಯಾಸ ಮಾಡಿರುವುದನ್ನು ಬಿಟ್ಟು
ಒಂದು ತಿರುವಟ್ (ತೀನ್ ತಾಳದಲ್ಲಿ).

## ವಿದ್ವತ್ ಪೂರ್ವ (ಪ್ರಿ–ಪ್ರೊಫಿಷಿಯನ್ಸಿ)

**ಪತ್ರಿಕೆ–1**

1. **ಕೆಳಗಿನ ಪಾರಿಭಾಷಿಕ ಶಬ್ದಗಳ ವಿವರವಾದ ಜ್ಞಾನ:**
ಅಂಗ, ಪ್ರತ್ಯಂಗ, ಉಪಾಂಗ, ಪುಷ್ಪಾಂಜಲಿ, ಸ್ಥಾನಕ, ಚಾರಿ, ಮಂಡಲ, ಉತ್‌ಪ್ಲವನ, ಭ್ರಮರಿ, ಗತಿ, ಕರಣ, ಅಂಗಹಾರ, ನಾಟ್ಯಧರ್ಮಿ, ಲೋಕಧರ್ಮಿ, ಭಾವ, ರಸ, ತಿಹಾರ್ (ಮುಕ್ತಾಯ).
2. ಥಾಟ, ಆಮದ, ಟುಕ್ಡಾ ಅವುಗಳ ಅಂಗಗಳು (ಸ್ಥಾನಕ, ಚಲನ ಮತ್ತು ನೃತ್ಯ ಹಸ್ತ ಹಾಗೂ ಅವುಗಳ ವಿಂಗಡಣಾ ಕ್ರಮಗಳು).
3. ಚತುರ್ವಿಧ ಅಭಿನಯಗಳ ವಿಶೇಷ ಅಭ್ಯಾಸ ಮತ್ತು ತಿಳುವಳಿಕೆ (ಅಭಿನಯ ದರ್ಪಣದಂತೆ).
4. ರಸ, ಭಾವ ಮತ್ತು ಅವುಗಳ ವಿಂಗಡಣಾ ಕ್ರಮಗಳು (ನಾಟ್ಯ ಶಾಸ್ತ್ರದಂತೆ)
5. ನಾಯಿಕಾ ಮತ್ತು ನಾಯಕ ಭಾವ ಮತ್ತು ಅವುಗಳ ವಿವರಣಾತ್ಮಕ ಅಭ್ಯಾಸ (ನಾಟ್ಯಶಾಸ್ತ್ರ ಮತ್ತು ದಶರೂಪಕದಂತೆ).
6. ನಾಟ್ಯ– ಪಾತ್ರ ಗುಣದೋಷಗಳು.
7. ನಾಟ್ಯದ ಪೂರ್ವರಂಗ ಮತ್ತು ನಾಟ್ಯ ಗ್ರಹಗಳ ವಿವರವಾದ ಪರಿಚಯ (ಭರತನ ನಾಟ್ಯ ಶಾಸ್ತ್ರದಂತೆ)

**ಪತ್ರಿಕೆ–2**

1. ನೃತ್ಯ ನಾಟಕಗಳು, ಗೇಯ ನಾಟಕಗಳು, ಭಾಗವತ ಮೇಳ, ಯಕ್ಷಗಾನ ಮತ್ತು ಕೊರವಂಜಿ ಅವುಗಳ ಪರಿಚಯ.

2. ಭಾರತದ ವಿವಿಧ ಪ್ರದೇಶಗಳಲ್ಲಿ ಪ್ರಚಾರದಲ್ಲಿರುವ ಜಾನಪದ ನೃತ್ಯಗಳ ಸಾಮಾನ್ಯ ಜ್ಞಾನ.
3. ವಿವಿಧ ಶಾಸ್ತ್ರೀಯ ನೃತ್ಯಗಳ ವೇಷ ಭೂಷಣಗಳನ್ನು ಕುರಿತು ವಿಶೇಷ ತಿಳುವಳಿಕೆ.
4. ರಂಗಭೂಮಿಯ ಉಚಿತ ಅಲಂಕಾರ, ಅದರ ಸಿದ್ಧತೆ, ಅವಶ್ಯಕವಾದ ಪ್ರದರ್ಶನ ವ್ಯವಸ್ಥೆಗಳು (ಧ್ವನಿ, ದೀಪ, ತೆರೆ ಮತ್ತು ವೇಷ ಭೂಷಣದ ಬಣ್ಣ ಇವುಗಳ ಅರಿವು.
5. ನೃತ್ಯಕ್ಕೆ ಸಂಬಂಧಿಸಿದ ದೇವಾಲಯಗಳು, ಶಿಲ್ಪ ಭಂಗಿಗಳು ಮತ್ತು 108ಕರಣಗಳ ತಿಳುವಳಿಕೆ.
6. ನೃತ್ಯದಲ್ಲಿ ಉಪಯೋಗಿಸುವ ತತ್, ಸುಷಿರ ಮತ್ತು ಅವನದ್ದ (ತಂತಿ, ಗಾಳಿ ಮತ್ತು ತಾಡನ) ವಾದ್ಯಗಳ ತಿಳುವಳಿಕೆ.
7. ನೃತ್ಯ ಶಾಸ್ತ್ರ ಗ್ರಂಥಗಳು, ಅವುಗಳ ವಿಷಯಗಳು ಮತ್ತು ಕರ್ತೃಗಳ ಪೂರ್ಣ ತಿಳುವಳಿಕೆ.

### ಪ್ರಯೋಗ ವಿಭಾಗ:ಪತ್ರಿಕೆ–1

**ಮೌಖಿಕ:**

1. ದೇವತಾ ಹಸ್ತಗಳು, ನವಗ್ರಹ ಹಸ್ತಗಳು ಮತ್ತು ಬಾಂಧವ್ಯ ಹಸ್ತಗಳನ್ನು ಗುರುತಿಸಿ ವಿನಿಯೋಗಿಸುವುದನ್ನು ತಿಳಿದಿರತಕ್ಕದ್ದು, 4ಮುಖ್ಯ ತಾಳಗಳ ಸಮ ಖಾಲಿ, ಜಾತಿಗಳ ಬಗ್ಗೆ ತಿಳಿದಿರಬೇಕು.
2. ಆಮದ, ಪರನ, ಟುಕ್ಡಾಗಳು ಮತ್ತು ತಿಹಾಯಿಗಳು ಇವುಗಳ ಬಗ್ಗೆ ತಿಳುವಳಿಕೆ ಮತ್ತು ಪಡಂತ (ನಟುವಾಂಗ) ಬೇರೆ ಬೇರೆ ತಾಳಗಳಲ್ಲಿ ಹೇಳಬೇಕು.

**ಹಾಡುಗಾರಿಕೆ:**

1. ಒಂದು ಠುಮರಿ ಮತ್ತು ಒಂದು ಅಷ್ಟಪದಿಯನ್ನು ಹಾಡುವುದು.
   ಅಥವಾ
   ಸಂಗೀತದ ಹಿಮ್ಮೇಳಕ್ಕೆ ಅನುಗುಣವಾಗಿ ಒಂದು ಧಮಾರಿನಲ್ಲಿ ರಚನೆಯನ್ನು ಹಾಡತಕ್ಕದ್ದು.
2. ಕೊಟ್ಟ ಯಾವುದಾದರೂ ತಾಳಕ್ಕೆ ಟುಕ್ಡಾಗಳು, ತಿಹಾಯ್‌ಯೊಂದಿಗೆ ರಚಿಸುವ ಸಾಮರ್ಥ್ಯ.

### ಪತ್ರಿಕೆ–2

1. ಅಭ್ಯರ್ಥಿಯು ಎರಡು ಆಮದ, ಎರಡು ಟುಕ್ಡಾ, ಎರಡು ಪರನ್‌ಗಳು, ತೀನ್‌ತಾಳ, ಝುಪತಾಳ ಮತ್ತು ಧಮಾರತಾಳಗಳಲ್ಲಿ ನರ್ತಿಸುವ ಪರಿಣತಿ ಹೊಂದಿರತಕ್ಕದ್ದು.
2. ಪಂಚಮ ಸವಾರಿಕಾಲವನ್ನು ಕಲಿಯತಕ್ಕದ್ದು. ಒಂದು ಥಾಟ, ಒಂದು ಆಮದ, ನಾಲ್ಕು ತೋಡಾಗಳು, ಎರಡು ಪರನ್, ಎರಡು ತಿಹಾಯ್, ತತ್ಕಾರದಲ್ಲಿ ತೋರಿಸತಕ್ಕದ್ದು.



3. ಒಂದು ಚತುರಂಗ ಅಥವಾ ಧಮಾರ ತಾಲದಲ್ಲಿ ನಾಲ್ಕು ಟುಕ್ಡಾ, ನಾಲ್ಕು ಪರನ್ ಮತ್ತು ನಾಲ್ಕು ತತ್‌ಕಾರ–ಲಡಿಗಳು.
4. ಒಂದು ಠುಮರಿ (ಹಿಂದೆ ಆಗಿರುವುದನ್ನು ಬಿಟ್ಟು).
5. ಎರಡು ಅಥವಾ ಹೆಚ್ಚಿಗೆ ಗತ್ ಭಾವಗಳು (ಹಿಂದೆ ಕಲಿತಿರುವುದರ ಹೊರತಾಗಿ), ರಾಮಾಯಣದಿಂದ ಆರಿಸತಕ್ಕದ್ದು–ಸೀತಾಹರಣ, ಜಟಾಯು ಮೋಕ್ಷ.
6. ಒಂದು ಭಜನ್–ಸೂರದಾಸ ಅಥವಾ ಮೀರಾ ಅವರ ಪದದ ಮೇಲೆ ಅಭಿನಯ.
7. ಒಂದು ದಾದ್ರಾ (ಜಾವಳಿ).
8. ಒಂದು ತರಾನಾ (ಹಿಂದೆ ಕಲಿತಿರುವುದಲ್ಲದೆ ಬೇರೆ ರಾಗ, ತಾಳದಲ್ಲಿ)
9. ವಿದ್ಯಾರ್ಥಿಗೆ ಇಷ್ಟವಾದ ಕಥಕ್‌ನಲ್ಲಿನ ಒಂದು ಶಾಸ್ತ್ರೀಯ ನೃತ್ಯ.

## ವಿದ್ವತ್ ಅಂತಿಮ (ಪ್ರೊಫಿಷಿಯನ್ಸಿ ಫೈನಲ್)

### ಶಾಸ್ತ್ರವಿಭಾಗ ಪತ್ರಿಕೆ–1

1. ನೃತ್ಯಕ್ಕೆ ಸಂಬಂಧಿಸಿದ ಸಂಸ್ಕೃತ ಕಾವ್ಯಗಳ, ನಾಟಕಗಳ ಮತ್ತು ಸಾಹಿತ್ಯ ಕೃತಿಗಳ ವಿಶೇಷ ತಿಳುವಳಿಕೆ.
2. ಶಿವನ ಸಪ್ತ ತಾಂಡವಗಳ ವಿಶೇಷ ತಿಳುವಳಿಕೆ.
3. ದಶಾವತಾರ ಹಸ್ತಗಳು, ಬಾಂಧವ್ಯ ಮತ್ತು ನವಗ್ರಹ ಹಸ್ತಗಳ ವಿಶೇಷ ಪರಿಚಯ (ಅಭಿನಯ ದರ್ಪಣದಂತೆ)
4. ಶಿರೋಭೇದ, ಗ್ರೀವಾಭೇದ ಮತ್ತು ದೃಷ್ಟಿ ಭೇದ ಇವುಗಳ ವಿಶೇಷ ತಿಳುವಳಿಕೆ ಮತ್ತು ವಿನಿಯೋಗ.
5. ಕಥಕ್ ನೃತ್ಯದಲ್ಲಿ ಬರುವ ಬೇರೆ ಬೇರೆ ಸನ್ನಿವೇಶಗಳಿಗೆ ಅನುಗುಣವಾಗಿ ಉಪಯೋಗಿಸುವ ಬೇರೆ ಬೇರೆ ರಾಗಗಳು (10 ರಾಗ ಲಕ್ಷಣಗಳು): ಕೇದಾರ, ಬಸಂತ, ಮಲಹಾರ, ಪುರ್ಯಾ, ಭೈರವಿ, ದರ್ಬಾರಿ, ಖಮಾಜ್, ಪೀಲು, ಮಾಲಕೌಂಸ, ಹಿಂಡೋಲ್,
6. ಲಕ್ನೋ ಮತ್ತು ಜಯಪುರ ಘರಾನಗಳಲ್ಲಿರುವ ವಿಶಿಷ್ಟತೆ. ಈ ಕ್ಷೇತ್ರದಲ್ಲಿರುವ ಮಹಾನುಭಾವರ ಸಂಕ್ಷಿಪ್ತ ಜೀವನ ಚರಿತ್ರೆಯ ವಿವರಣೆ.

### ಪತ್ರಿಕೆ–2 (ಅ)

1. ಶಾಸ್ತ್ರೀಯ ನೃತ್ಯದ ಪುನರುಜ್ಜೀವನ, ಬೆಳವಣಿಗೆ
2. ಸಮಕಾಲೀನ ನೃತ್ಯಗಳ ಪ್ರವೃತ್ತಿಗಳು.
3. ಪ್ರಸಿದ್ಧ ವಾಗ್ಗೇಯಕಾರರು ಮತ್ತು ಗುರುಗಳ ಪರಂಪರೆ, ಅವರ ಕೊಡುಗೆ ಮತ್ತು ಜೀವನ ಚರಿತ್ರೆ.

**ಪತ್ರಿಕೆ –2 (ಬಿ)**

1. ಪಾಶ್ಚಾತ್ಯ ಶಾಸ್ತ್ರೀಯ ಬ್ಯಾಲೆಗಳ ಹುಟ್ಟು ಮತ್ತು ಬೆಳವಣಿಗೆ.
2. ಆಧುನಿಕ ಪಾಶ್ಚಾತ್ಯ ನೃತ್ಯಗಳು–ಇವುಗಳ ವಿಶೇಷ ತಿಳುವಳಿಕೆ.
3. ಭಾರತೀಯ ರಚನಾತ್ಮಕ ಮತ್ತು ನೃತ್ಯ ನಾಟಕಗಳ ಮೇಲೆ ಪಾಶ್ಚಾತ್ಯ ನೃತ್ಯಗಳ ಮತ್ತು ಬ್ಯಾಲೆಗಳ ಪ್ರಭಾವ (ತಂತ್ರಜ್ಞಾನ, ಪ್ರದರ್ಶನ ಪದ್ಧತಿ, ಇತ್ಯಾದಿಗಳು)ದ ವಿವರವಾದ ಅಧ್ಯಯನ.

**ಪ್ರಯೋಗ ವಿಭಾಗ: ಪತ್ರಿಕೆ–1**

1. ಒಂದು ಪುಷ್ಪಾಂಜಲಿ–ವಂದನಾ.
2. ಅಷ್ಟಮಂಗಲ–ತಾಳ ಪದ್ಧತಿಯ ವಿವರವಾದ ಅಧ್ಯಯನ, ಆಮದ್, ಗತ್, ಟುಕ್ಡಾ, ಪರನ್, ತತ್‌ಕಾರ
3. ಬೇರೆ ಬೇರೆ ನಾಯಿಕಾ ಭಾವವುಳ್ಳ ಎರಡು ಪದಗಳು (ಹಿಂದೆ ಕಲಿತಿರುವುದಲ್ಲದೆ)
4. ಅಷ್ಟಪದಿ–ಒಂದು ಸರ್ಗ.
5. ನವರಸ ಅಭಿನಯ.
6. ಎರಡು ಶ್ಲೋಕಗಳು (ಹಿಂದೆ ಕಲಿತಿರುವುದಲ್ಲದೆ).
7. ಒಂದು ಶಿವಪರನ್ ಅಥವಾ ಗಣೇಶಪರನ್ (ತ್ರಿಕಾಲದಲ್ಲಿ)
8. ಒಂದು ಠುಮರಿ (ಹಿಂದೆ ಕಲಿತಿರುವುದಲ್ಲದೆ).
9. ಒಂದು ಧ್ರುಪದ್ ನರ್ತಿಸುವ ಸಾಮರ್ಥ್ಯ.
10. ಮಹಾರಾಜ ಬಿಂಧಾದೀನರ ಕೃತಿ ಅಥವಾ ಜಯದೇವ ಕವಿಯ ಒಂದು ಅಷ್ಟಪದಿಯ ಅಭಿನಯ.

**ಪತ್ರಿಕೆ–2 (ಭಾಗ–I)**

ನೃತ್ಯಪ್ರದರ್ಶನ:

1. ಒಂದು ಪ್ರಬಂಧ.
2. ಒಂದು ತಿರ್ವಟ ಅಥವಾ ಗತಭಾವ–ಮಹಾಭಾರತದಲ್ಲಿನ 'ದ್ರೌಪದಿ ಚೀರ ಹರನ' ಅಥವಾ 'ಕೃಷ್ಣ ಲೀಲಾ'ದಿಂದ ಹೋರಿ ಅಥವಾ ಕಾಲಿಯ ಮರ್ದನ.
3. ರೂಪಕ ತಾಳದಲ್ಲಿ ಒಂದು ರಚನೆ.
4. ನಾಯಿಕಾ ಭಾವವುಳ್ಳ ಒಂದು ಪದ.
5. ಅಷ್ಟಪದಿ–(ಒಂದು ಸರ್ಗ–ಹಿಂದೆ ಕಲಿತಿರುವುದಲ್ಲದೆ)
6. ಎರಡು ಶ್ಲೋಕಗಳಿಗೆ ಅಭಿನಯ (ಹಿಂದೆ ಕಲಿತಿರುವುದಲ್ಲದೆ)
7. ಒಂದು ತರಾನಾ (ಹಿಂದೆ ಕಲಿತಿರುವುದಲ್ಲದೆ ಬೇರೆ ರಾಗದಲ್ಲಿ).



**ಪತ್ರಕ–2 (ಭಾಗ–II)**

**ಮೌಖಿಕ:**

1. ಕೊಟ್ಟ ಯಾವುದಾದರೂ ತಾಳಕ್ಕೆ ಟುಕ್ಡಾ ಮತ್ತು ತಿಹಾಯ್‌ಗಳನ್ನು ಲಯಬದ್ಧವಾಗಿ ರಚಿಸುವ ಸಾಮರ್ಥ್ಯ ಇರತಕ್ಕದ್ದು.
2. ಕೊಟ್ಟ ಯಾವುದಾದರೂ ಒಂದು ಗೇಯ ಸಾಹಿತ್ಯಕ್ಕೆ ಅಭಿನಯಿಸುವ ಸಾಮರ್ಥ್ಯ
3. ಒಂದು ರಸೋತ್ಪತ್ತಿಗೆ ಕಾರಣವಾದ ಭಾವ, ವಿಭಾವ, ಅನುಭಾವ, ಸಂಚಾರಿ ಭಾವಗಳೊಂದಿಗೆ ಒಂದು ಘಟನೆಯನ್ನು ತೋರಿಸುವ ಸಾಮರ್ಥ್ಯ.
4. ನಾಯಿಕಾ ಮತ್ತು ನಾಯಕ ಭಾವವನ್ನು ಕ್ರಮವಾಗಿ ಅಭಿನಯಿಸುವ ಸಾಮರ್ಥ್ಯ.
5. ಕಥಕ್ ನೃತ್ಯ ಮತ್ತು ಅಭಿನಯದ ವೈಶಿಷ್ಟ್ಯದ ಬಗ್ಗೆ ತಿಳುವಳಿಕೆ.
   **(19ನೇ ಪುಟದಲ್ಲಿ ಹೇಳಿರುವಂತೆ)**